ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
C/o. ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560001, ಕರ್ನಾಟಕ
**E-mail ID:** icps.kar@gmail.com **Ph.No.080-22879381/82**

ಸಂಖ್ಯೆ:ಕೆಎಸ್‌ಐಸಿಪಿಎಸ್/ಮರ/ತೆ.ತಂ-47/2019-20 ದಿನಾಂಕ: 11 .10.2020
11.11.2020

## ಸುತ್ತೋಲೆ

**ವಿಷಯ:** ತೆರೆದ ತಂಗುದಾಣಗಳ ಕಾರ್ಯನಿರ್ವಹಣೆ ಕುರಿತು.

**ಉಲ್ಲೇಖ:** 1. ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015 ಮತ್ತು ಬಾಲನ್ಯಾಯ ಮಾದರಿ ನಿಯಮಗಳು 2016.
2. ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಪರಿಷ್ಕೃತ ಮಾರ್ಗಸೂಚಿ, 2016.

* * * * *

ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ನಗರ ಮತ್ತು ಅರೆನಗರ ಪ್ರದೇಶದ ಮಕ್ಕಳಿಗಾಗಿ ತೆರೆದ ತಂಗುದಾಣಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ನಿರ್ವಹಿಸಲಾಗುತ್ತಿದೆ. ಪರಿಷ್ಕೃತ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಮಾರ್ಗಸೂಚಿಯನ್ವಯ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ತೆರೆದ ತಂಗುದಾಣಗಳನ್ನು ನಿರ್ವಹಿಸುವುದು ಅಗತ್ಯ. ತೆರೆದ ತಂಗುದಾಣಕ್ಕೆ ದಾಖಲಾದ ಮಕ್ಕಳ ಬಗ್ಗೆ ಮಕ್ಕಳ ಕಲ್ಯಾಣ ಸಮಿತಿಯ ಗಮನಕ್ಕೆ ತರದೆ ಇರುವುದು ಹಾಗೂ ಮಕ್ಕಳನ್ನು ದೀರ್ಘಾವಧಿ ಕಾಲದವರೆಗೆ ತೆರೆದ ತಂಗುದಾಣದಲ್ಲಿಯೇ ಮುಂದುವರಿಸುತ್ತಿರುವುದು ನಿರ್ದೇಶಕರ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ, ಕಡ್ಡಾಯವಾಗಿ ಈ ಕೆಳಕಾಣಿಸಿದ ನಿಯಮವನ್ನು ಪಾಲಿಸಲು ಸೂಚಿಸಿದೆ.

1. ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ-2015ರ ಸೆಕ್ಷನ್-31 ಮತ್ತು ಮಾದರಿ ನಿಯಮಗಳು 2016 ರ ನಿಯಮ 22ರಂತೆ ಪುನರ್ವಸತಿಗಾಗಿ ತೆರೆದ ತಂಗುದಾಣಕ್ಕೆ ಕರೆತಂದ ಮಕ್ಕಳನ್ನು **ಪ್ರಯಾಣದ ಅವಧಿ ಹೊರತುಪಡಿಸಿ 24 ಘಂಟೆಗಳೊಳಗಾಗಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರು ಪಡಿಸಿ, ತಾತ್ಕಾಲಿಕ ಅಭಿರಕ್ಷಣೆ ಆದೇಶ ಪಡೆಯತಕ್ಕದ್ದು**. 24 ಗಂಟೆಯೊಳಗೆ ಪೋಷಕರು ಪತ್ತೆಯಾದಲ್ಲಿ ಮಕ್ಕಳ ಕಲ್ಯಾಣ ಸಮಿತಿಗೆ ಮಾಹಿತಿ ನೀಡಿ, ಪೋಷಕರಿಗೆ ಒಪ್ಪಿಸಬಹುದು.

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ), ಮಾದರಿ ನಿಯಮಗಳು, 2016ರ ಕೆಳಕಂಡ ನಿಯಮ 19(11) ಈ ಕೆಳಗಿನಂತಿದ್ದು, ಕಡ್ಡಾಯವಾಗಿ ಪಾಲಿಸತಕ್ಕದ್ದು.

"In all cases pending inquiry, the Committee shall notify the next date of appearance of the child not later than fifteen days of the previous date and also seek periodic status report from the social worker or case worker or Child Welfare Officer conducting investigation on each such date."

2. ತೆರೆದ ತಂಗುದಾಣಗಳು ಮಕ್ಕಳಿಗೆ ತಾತ್ಕಾಲಿಕ ಆಶ್ರಯಕ್ಕೆ ಮಾತ್ರ ಉದ್ದೇಶಿಸಲಾದ ಮಕ್ಕಳ ಪಾಲನಾ ಸಂಸ್ಥೆ (CCI)ಗಳಾಗಿರುವುದರಿಂದ ಮಕ್ಕಳನ್ನು ತೆರೆದ ತಂಗುದಾಣಗಳಲ್ಲಿ **ಗರಿಷ್ಠವಾಗಿ 6 ತಿಂಗಳ ಅವಧಿವರೆವಿಗೆ ಮಾತ್ರ** ವಾಸ್ತವ್ಯದಲ್ಲಿರಿಸಬಹುದು. ಈ ಅವಧಿಯಲ್ಲಿ ಮಕ್ಕಳಿಗೆ ಅಗತ್ಯ ಸಂಪರ್ಕ ಶಿಕ್ಷಣ ನೀಡುವ ಮೂಲಕ, ಸೂಕ್ತ ಸಮಾಲೋಚನೆ ಮಾಡುವ ಮೂಲಕ ಶಿಕ್ಷಣದ ಮುಖ್ಯವಾಹಿನಿಗೆ ತರುವ ಬಗ್ಗೆ ಅಥವಾ ಯಾವುದಾದರೂ ಕೌಶಲ್ಯ ತರಬೇತಿಗೆ ಒಳಪಡಿಸುವ ಸಾಧ್ಯತೆ ಕುರಿತು ನಿರ್ಧಾರಕ್ಕೆ ಬರತಕ್ಕದ್ದು ಹಾಗೂ ಮಕ್ಕಳನ್ನು ಕುಟುಂಬಕ್ಕೆ ವಿಲೀನಗೊಳಿಸಬೇಕೆ ಅಥವಾ ಬೇರೆ ಸಂಸ್ಥೆಗೆ ದಾಖಲಿಸಬೇಕೆ ಎಂಬ ನಿರ್ಣಯಕ್ಕೆ ಬರತಕ್ಕದ್ದು. ತದನಂತರ ಮಕ್ಕಳ ಕಲ್ಯಾಣ ಸಮಿತಿಯಿಂದ ಸೂಕ್ತ ಆದೇಶ ಪಡೆಯುವುದು.

3. ತೆರೆದ ತಂಗುದಾಣಗಳನ್ನು ದಿನಾಂಕ:29–08–2020ರಂದು ನಿರ್ದೇಶನಾಲಯದಿಂದ ಹೊರಡಿಸಿದ ಮಕ್ಕಳ ಪಾಲನ ಸಂಸ್ಥೆಗಳ ಕುರಿತಾದ ಸುತ್ತೋಲೆ ಪ್ರಕಾರ ಪ್ರಾಯವಾರು ಮತ್ತು ಲಿಂಗವಾರು ಅವಶ್ಯಕ ವಿಂಗಡಣೆಯನ್ನು ಆಯ್ಕೆ ಮಾಡಿ ಅದರಂತೆ ತೆರೆದ ತಂಗುದಾಣಗಳ ನೋಂದಣಿ ಪ್ರಕ್ರಿಯೆಯ ತಿದ್ದುಪಡಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವುದು. ಜಿಲ್ಲಾ ತನಿಖಾ ಸಮಿತಿಯ (DIC) ತನಿಖಾ ವರದಿಯೊಂದಿಗೆ ಈ ಪ್ರಸ್ತಾವನೆಗಳನ್ನು ಸಲ್ಲಿಸುವುದು.

ಮೇಲಿನ ನಿಯಮಗಳ ಉಲ್ಲಂಘನೆಯು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಸೆಕ್ಷನ್ 33ರ ಅನ್ವಯ ಅಪರಾಧವಾಗಿದ್ದು ಸೆಕ್ಷನ್ 34ರ ಅನ್ವಯ ಶಿಕ್ಷೆ ವಿಧಿಸಬಹುದಾಗಿರುತ್ತದೆ ಹಾಗೂ ಸದರಿ ಕಾಯ್ದೆಯ ಸೆಕ್ಷನ್ 41(2)ರ ಪ್ರಕಾರ ಸಂಸ್ಥೆಗಳ ನೋಂದಣಿ ಮಾಡಲಾಗುತ್ತದೆ. ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮ 2016ರ ನಿಯಮ 29ರ ಅನ್ವಯ ಮೂಲಭೂತ ಸೌಕರ್ಯ ಒದಗಿಸಬೇಕಾಗಿರುತ್ತದೆ. ಆದರಿಂದ ಈ ರೀತಿಯ ನಿಯಮ ಉಲ್ಲಂಘನೆಯಾಗಿರುವುದು ಕಂಡು ಬಂದಲ್ಲಿ ಕಠಿಣ ಕ್ರಮಕೈಗೊಳ್ಳಲಾಗುವುದು.

ನಿರ್ದೇಶಕರು(ಪ್ರಭಾರ)
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

ಪ್ರತಿಗಳು:

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿ/ಅಧ್ಯಕ್ಷರು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಮಾಹಿತಿಗಾಗಿ.
3. ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಮಾಹಿತಿಗೆ ಹಾಗೂ ಸಂಬಂಧಪಟ್ಟ ಎಲ್ಲಾ ಸಂಸ್ಥೆಗಳಿಗೆ ಮಾಹಿತಿ ಒದಗಿಸಿ ಅನುಪಾಲನೆಯನ್ನು ನೀಡುವುದು ಹಾಗೂ ಜಿಲ್ಲಾ ತನಿಖಾ ಸಮಿತಿಯವರ ಗಮನಕ್ಕೆ ತರಲು ಕ್ರಮವಹಿಸುವುದು.
4. ಎಲ್ಲಾ ಜಿಲ್ಲೆಗಳ ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ ಇವರ ಮಾಹಿತಿಗಾಗಿ.